**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.</u>**

## **M.V.C.**1109/2020

**ಸಾಕ್ಷಿಯನ್ನು ದಿಃ 06.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. SSG ಪರ ಶ್ರೀ. SG ವಕೀಲರಿಂದಃ–</u>**

ದಿಃ 30.03.2020ರ ಸರ್ಕಾರಿ ಅಧಿಸೂಚನೆಯ ಯಥಾ ನಕಲನ್ನು ನಿಆರ್–1 ಎಂದು, ದಿಃ 28.08.2020ರ ಕರ್ನಾಟಕ ಸರ್ಕಾರದ ಅಧಿಸೂಚನೆಯ ಯಥಾ ನಕಲನ್ನು ನಿಆರ್–2 ಎಂದು, ದಿಃ 03.04.2020ರ ಕರ್ನಾಟಕ ಸರ್ಕಾರದ ಅಧಿಸೂಚನೆಯ ಯಥಾ ನಕಲನ್ನು ನಿಆರ್–3 ಎಂದು, ದಿಃ 19.05.2020ರ ಕರ್ನಾಟಕ ಸರ್ಕಾರದ ಅಧಿಸೂಚನೆಯ ಯಥಾ ನಕಲನ್ನು ನಿಆರ್–4 ಎಂದು ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ. MBG ವಕೀಲರಿಂದ**:

ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಎಲ್ಲಾ ಪೋಲಿಸ್ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ನಾನು SSLC ಓದಿದ್ದೇನೆ. ನನಗೆ ಕನ್ನಡ ಸ್ಪಷ್ಟವಾಗಿ ಓದಲು ಬರುತ್ತದೆ. ಅರ್ಜಿದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿದ್ದಿರಿ ಎಂದರೆ ಖಾಸಗಿ ದೂರನ್ನು ಹಾಜರುಪಡಿಸಿದ್ದೇನೆ. ಖಾಸಗೀ ದೂರಿನ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ವಕೀಲರ ಮೂಲಕ ಕೊಟ್ಟಿದ್ದೇನೆ. ಖಾಸಗೀ ದೂರನ್ನು ಎಲ್ಲಿ ನೀಡಿದ್ದಿರಿ ಎಂದರೆ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ನೀಡಿದ್ದೇನೆ. ಅಪಘಾತದವಾದ ಒಂದು ದಿನದ ನಂತರ ದೂರನ್ನು ನೀಡಿದ್ದೇನೆ. ನಾನು ಯಾವುದೆ ದೂರನ್ನು ನೀಡದೇ ಇರುವ ಕಾರಣ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಚಾಲನಾ ಪತ್ರ ಇರಲಿಲ್ಲ, ಹೆಲ್ಮೆಟ್ ಧರಿಸಿರಲ್ಲಿಲ್ಲ ಮತ್ತು ಮಧ್ಯ ಸೇವನೆ ಮಾಡಿದರು ಎಂದು ತೋರಿಸಲು ನಾನುಯಾವುದೇ ದಾಖಲೆ ಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನೇ ಅರ್ಜಿದಾರರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದೆ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ಪೋಲಿಸರು ನನ್ನ ವಿರುದ್ಧ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

ನಿಪಿ-7 ರಲ್ಲಿರುವ ರಮೇಶ.ಕೆ ಬಿನ್ ಕಾಳಶೆಟ್ಟಿ ಎಂದರೆ ನಾನೇ. ವಾಹನ 2ನೇ ಎದುರುದಾರರಿಗೆ ಸೇರಿದ್ದು ಎಂದರೆ ಸರಿ 2ನೇ ಎದುರುದಾರರನ್ನು ಕ್ರಿಮಿನಲ್ ಪ್ರಕರಣದಲ್ಲಿ 2ನೇ ಆರೋಪಿಗಯಾಗಿ ಕಾಣಿಸಿದ್ದಾರೆ ಎಂದರೆ ಸರಿ. ನನ್ನ ವಿರುದ್ಧ ಸಲ್ಲಿಸಿರುವ ಅಂತಿಮ ವರದಿ ಸರಿ ಇಲ್ಲ ಎಂದು ನಾನು ಎಲ್ಲಿಯೂ ಕೂಡ ಮೇಲ್ಮನವಿ ಸಲ್ಲಿಸಿಲ್ಲ. ಪಿ.ಸಿ.ಆರ್ ದಾಖಲು ಮಾಡಿದ್ದೇನೆ. ಅಪಘಾತದಿಂದಾಗಿ ನನ್ನ ಮಗಳಿಗೆ ಗಾಯವಾಗಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ದಾಖಲೆ ಹಾಜರುಪಡಿಸದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೇವಲ ದಿಃ 19.06.2020ರವರೆಗೆ ಮಾತ್ರ ಕಾರು ಹಾಗೂ ದ್ವಿಚಕ್ರ ವಾಹನವನ್ನು ಚಲಾಯಿಸುವ ಚಾಲನಾ ಪತ್ರ ನೀಡಲಾಗಿತ್ತು ಎಂದರೆ 50 ವರ್ಷದ ನಂತರ ರಿನಿವಲ್ ಮಾಡಿಸಬೇಕಾಗಿತ್ತು, ಕೋರೋನಾ ಇದ್ದ ಕಾರಣ ರಿನಿವಲ್ ಮಾಡಿಸಲು ಆಗುವುದಿಲ್ಲ. ಸಾಕ್ಷಿಗೆ ಡಿಎಲ್ ನ ನಕಲು ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದು, ನಕಲು ಪ್ರತಿಯಾಗಿರುವ ಕಾರಣ ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ. ಕಡತಕ್ಕೆ ಅಳವಡಿಸಲಾಯಿತು. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಕೂಡ ಪರಿಹಾರ ಕೊಡುವ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಯಾವುದೇ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 3ನೇ ಎದುರುದಾರರ ಪರ ಶ್ರೀ. ಪಿ.ಡಿ ವಕೀಲರಿಂದ**:

ಅರ್ಜಿದಾರರು ಆ ದಿನ ಯಾವ ರೀತಿ ವಾಹನ ಚಲಾಯಿಸಿಕೊಂಡು ಬಂದರು ಎಂದರೆ ವೇಗವಾಗಿ ಬಂದು ಡಿಕ್ಕಿಪಡಿಸಿದರು. ನಿಪಿ-4 ರ ಪ್ರಕಾರ ಅಪಘಾತವು ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ನಾನು ಬರುತ್ತಿದ್ದ ಜಾಗದಲ್ಲಿ ಆಗಿದೆ. ಅಪಘಾತದ ಸಮಯದಲ್ಲಿ ಕಾರು ಚಲಾಯಿಸಲು ನನ್ನ ಬಳಿ ಚಾಲನಾ ಪತ್ರ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಠಾಣೆಯಲ್ಲಿ ಕೊಟ್ಟಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ನನ್ನ ಬಳಿ ಡಿ.ಎಲ್ ಇರಲಿಲ್ಲ ಎಂದು ನನ್ನ ಮತ್ತು 2ನೇ ಎದುರುದಾರರ ವಿರುದ್ಧ ಪೋಲಿಸರು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಡಿ.ಎಲ್ ನ್ನು ಆ ಸಮಯದಲ್ಲಿ ಪೋಲಿಸರಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ ನನ್ನ ಬಳಿ ಡಿ.ಎಲ್ ಇರದೇ ಇರುವ ಕಾರಣ ಮತ್ತು ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ಅರ್ಜಿದಾರರಿಗೆ ಪರಿಹಾರ ನೀಡಲು ನಾನು ಮತ್ತು 2ನೇ ಎದುರುದಾರರು ಬಾಧ್ಯಸ್ಥರೇ ಹೊರತು 3ನೇ ಎದುರುದಾರರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.